VIJAYAKUMAR KANNUR
Digitally signed by VIJAYAKUMAR KANNUR
Date: 2025.09.15 17:20:36 +0530



**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ</u>**

**<u>ಸಾಕ್ಷಿಗೆ ಇಂದು ದಿನಾಂಕ 15.09.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ವಿ ಕೆ ವಕೀಲರಿಂದ :</u>**

ನನಗೆ ವಿಜಯ ಕುಮಾರ್ ಮೋಹನ್ ಲಾಲ್ ಪರದು ಇವರ ಪರಿಚಯ ಇರುವುದಿಲ್ಲ. ಮಾನವ್ ವಿಜಯಕುಮಾರ್ ಪರದು ಇತನ ಪರಿಚಯ ಸಹ ನನಗೆ ಇರುವುದಿಲ್ಲ. ನನ್ನ ಮುಖ್ಯ ಉದ್ಯೋಗ ಒಕ್ಕಲತನ. ಆರೋಪಿಗೆ ನೀಡಿರುವ ಹಣ ನನ್ನ ನಿವೇಶನದಿಂದ ಮಾರಾಟ ಮಾಡಿ ಬಂದ ಹಣದಲ್ಲಿ ನೀಡಿರುವೆನು. ಈ ನಿವೇಶನವನ್ನು ಮಳಲಿ ಎಂಬುವವರಿಗೆ ಮಾರಾಟ ಮಾಡಿರುವೆನು. ಅವರ ಪೂರ್ಣ ಹೆಸರು ನನಗೆ ನೆನಪಿರುವುದಿಲ್ಲ.

2. ಈ ನಿವೇಶನ ಮಾರಾಟದ ಖರೀದಿ ಪತ್ರದ ಮೇಲೆ ಸಾಕ್ಷಿದಾರ ಅಂತ ಎಷ್ಟು ಜನರು ಸಹಿ ಮಾಡಿದ್ದರು ಎಂಬ ಸಂಗತಿ ನನಗೆ ನೆನಪಿರುವುದಿಲ್ಲ. ಜುಲೈ ತಿಂಗಳ 2024 ರಲ್ಲಿ ಈ ನಿವೇಶನ ಮಾರಾಟ ಮಾಡಿರುವೆನು, ಆದರೆ ದಿನಾಂಕ ನಿರ್ದಿಷ್ಟವಾಗಿ ನನಗೆ ನೆನಪಿರುವುದಿಲ್ಲ. ಈ ಹಣವನ್ನು ಆರೋಪಿಗೆ ಈ ನಿವೇಶನ ಮಾರಾಟ ಮಾಡಿದ ನಂತರ ನೀಡಿರುವೆನು. ಈ ನಿವೇಶನ ಮಾರಾಟದ ಹಣ ಖರೀದಿದಾರರು ತಮ್ಮ ಕೈನರಾ ಬ್ಯಾಂಕ್ ಶಾಖೆ ಚಿಪ್ಪಲಕಟ್ಟಿಯಿಂದ ನನ್ನ ಹೆಚ್ ಡಿ ಎಫ್ ಸಿ ಬ್ಯಾಂಕ್ ಖಾತೆಗೆ ಆರ್ ಟಿ ಜಿ ಎಸ್ ಮೂಲಕ ರೂ. 5 ಲಕ್ಷ 60 ಸಾವಿರ ಹಣ ವರ್ಗಾವಣೆ ಮಾಡಿರುವರು ಎಂದರೆ ಸರಿ. ಈ ಹಣವನ್ನು ನಾನು ನಗದು ರೂಪದಲ್ಲಿ ಪಡೆದುಕೊಂಡಿರುವುದಿಲ್ಲ. ನಾನು ರನ್ನ ಸೌಹಾರ್ದ ಬ್ಯಾಂಕ್ ನಿಂದ ಕಂತುಗಳ ರೂಪದಲ್ಲಿ ಒಟ್ಟು ರೂ. 5 ಲಕ್ಷ 60 ಸಾವಿರ ಹಣ ತೆಗೆದುಕೊಂಡಿರುವೆನು. ನನ್ನ ಹೆಚ್ ಡಿ ಎಫ್ ಸಿ ಬ್ಯಾಂಕ್ ಮುಧೋಳ ಶಾಖೆಯ ಖಾತೆಯಿಂದ ನನ್ನ ಹಸೆರಿನಲ್ಲಿ ಇರುವ ರನ್ನ ಸೌಹಾರ್ದ ಬ್ಯಾಂಕ್ ಗೆ ನಾನೇ ಆರ್ ಟಿ ಜಿ ಎಸ್ ಮೂಲಕ ವರ್ಗಾವಣೆ

ಮಾಡಿರುವೆನು. ಈ ಹಣ ವರ್ಗಾವಣೆ ಮಾಡಿದ ಬಗ್ಗೆ ನಾನು ದಾಖಲೆಯನ್ನು ಹಾಜರು ಪಡಿಸಿರುವೆನು.

3. ಶ್ರೀ ವಿಠಲ ರಾವ್ ಬಾ ಪಾಟೀಲ ಎಂಬ ಹೆಸರಿನ ವ್ಯಕ್ತಿ ನಾನೇ ಆಗಿರುವೆನು. ಆರೋಪಿಗೆ ನೀಡಿರುವ ಹಣ ನಮ್ಮ ಮನೆಯಲ್ಲಿ ಸಂಗ್ರಹಿಸಿ ಇಟ್ಟಿರುವ ಹಣ ನೀಡಿರುವೆನು. ಆರೋಪಿಗೆ ಸಾಲ ನೀಡುವ ಪೂರ್ವದಲ್ಲೇ ನಾನು ರನ್ನ ಸೌಹಾರ್ದ ಬ್ಯಾಂಕ್ ನಿಂದ ಹಣ ಪಡೆದು ಮನೆಯಲ್ಲಿ ಇಟ್ಟಿದ್ದು , ಆ ಹಣವನ್ನೇ ಆರೋಪಿಗೆ ಸಾಲವಾಗಿ ನೀಡಿರುವೆನು. ನಾನು ರನ್ನ ಸೌಹಾರ್ದ ಬ್ಯಾಂಕ್ ನಿಂದ ರೂ. 5 ಲಕ್ಷ 60 ಸಾವಿರ ಹಣವನ್ನು ಪಡೆದು ನನ್ನ ಮನೆಯಲ್ಲಿ ಇಟ್ಟುಕೊಂಡಿದ್ದೇನು ಎಂದರೆ ಸರಿ. ನಾನು ನಿವೇಶನ ಮಾಡಿದ 15-20 ದಿನಗಳ ಅವಧಿಯ ಒಳಗೆ ಆರೋಪಿಗೆ ಕೈಗಡ ಸಾಲದ ಹಣ ನೀಡಿರುವೆನು. ಆರೋಪಿಗೆ ನನಗೆ ನಿಪಿ 1 ರ ಚೆಕ್ ನ್ನು 2024 ರ ಡಿಸೆಂಬರ್ ತಿಂಗಳಲ್ಲಿ ನೀಡಿರುವನು. ನಿರ್ದಿಷ್ಟ ದಿನಾಂಕ ನನಗೆ ನೆನಪಿರುವುದಿಲ್ಲ. ಆರೋಪಿ ನನಗೆ ರೂ. 7 ಲಕ್ಷ 60 ಸಾವಿರ ಹಣವನ್ನು ಸಾಲವಾಗಿ ನೀಡುವಂತೆ ಕೇಳಿಕೊಂಡಿರುವನು.

4. ಆರೋಪಿ ನನಗೆ 1 ವರ್ಷದಿಂದಲೂ ಆತ್ಮೀಯನಾಗಿದ್ದನು. ವಿನಾಯಕ ಎಸ್ ನಲಗೆ ಎಂಬುವವನು ನನಗೆ ಆರೋಪಿಯ ಪರಿಚಯ ಮಾಡಿಸಿರುವನು. ಇವರು ಮುಧೋಳದ ರನ್ನ ಸೌಹಾರ್ದ ಬ್ಯಾಂಕ್ ನ ನಿರ್ದೇಶಕರು ಎಂದರೆ ಸರಿ. ನಾನು ಮುಧೋಳದ ರನ್ನ ಸೌಹಾರ್ದ ಬ್ಯಾಂಕ್ ಅಧ್ಯಕ್ಷನು ಎಂದರೆ ಸರಿ. ನಿಪಿ 1(ಎ) ಆರೋಪಿಯ ಸಹಿ ಆಗಿರುವುದು. ನಿಪಿ 1 ರ ಮೇಲಿನ ಆರೋಪಿಯ ಸಹಿ ಶಾಹಿ ಹಾಗೂ ಅದರ ಮೇಲಿನ ಉಳಿದ ಬರಹಗಳು ಬೇರೆಯ ಶಾಹಿಯದ್ದು ಆಗಿರುವುದು ಎಂದರೆ ಸರಿ. ನಮ್ಮ ಬ್ಯಾಂಕ್ ನಿಂದ ಸಾಲ ನೀಡುವ ಸಮಯದಲ್ಲಿ ಆ ಸಾಲದ ಅರ್ಜಿಯ ಜೊತೆ ಜಾಮೀನುದಾರರನ್ನು ನೀಡಿದಾಗ ಸಾಲ ಮಂಜೂರು ಮಾಡುತ್ತೇವೆ ಎಂದರೆ ಅದರ ಬಗ್ಗೆ ತನಗೆ ಮಾಹಿತಿ ಇರುವುದಿಲ್ಲ, ತಮ್ಮ ಬ್ಯಾಂಕ್ ನ ಸಿಬ್ಬಂದಿಗಳಿಗೆ ಮಾಹಿತಿ ಇರುವುದು ಎಂದು ಸಾಕ್ಷಿ ಉತ್ತರಿಸುವರು.

5. ಆರೋಪಿಗೆ 7 ಲಕ್ಷ 60 ಸಾವಿರ ಹಣ ನೀಡುವಂತೆ ನನಗೆ ವಿನಾಯಕ ನಲಗೆಯವರು

ಹೇಳಿರುವುದರಿಂದ ನಾನು ಈ ಹಣ ನೀಡಿರುವೆನು. ನನಗೂ ಮತ್ತು ವಿನಾಯಕನ ಮಧ್ಯೆ ಸುಮಾರು 10-15 ವರ್ಷಗಳಿಂದ ಪರಿಚಯ ಇರುವುದು. ಆರೋಪಿಯು ವಿನಾಯಕನಿಗೆ ಎಷ್ಟು ವರ್ಷಗಳಿಂದ ಪರಿಚಯ ಇರುವನು ಎಂದು ನನಗೆ ಮಾಹಿತಿ ಇರುವುದಿಲ್ಲ. ಆರೋಪಿಗೆ ನಾನು ರೂ. 7 ಲಕ್ಷ 60 ಸಾವಿರ ಹಣ ವೈಯಕ್ತಿಕವಾಗಿ ಸಾಲ ನೀಡಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಜಯ ಕುಮಾರ್ ಪದ್ದು ಮತ್ತು ಮಾನವ್ ಪದ್ದು ಇವರಿಗೆ ರನ್ನ ಸೌಹಾರ್ದ ಬ್ಯಾಂಕ್ ನಿಂದ ಪಿಗ್ಮಿ ಸಾಲ ನೀಡಿದ್ದೇವೆ ಎಂದರೆ ಸಾಕ್ಷಿ ನುಡಿಯುವುದೇನೆಂದರೆ ಇದರ ಬಗ್ಗೆ ತನಗೆ ಮಾಹಿತಿ ಇರುವುದಿಲ್ಲ, ಆ ಬ್ಯಾಂಕ್ ನ ಸಿಬ್ಬಂದಿಗಳಿಗೆ ಮಾಹಿತಿ ಇರುವುದು ಎಂದು ಸಾಕ್ಷಿ ಉತ್ತರಿಸುವರು. ವಿಜಯ ಕುಮಾರ್ ಪದ್ದು ಮತ್ತು ಮಾನವ್ ಪದ್ದು ಇವರು ಟಾಯರನ ರಿಮೋಟ್‌ನ ಪ್ರಸಿದ್ದವಾದ ಅಂಗಡಿ ಹೊಂದಿರುವರು ಎಂದರೆ ಸಾಕ್ಷಿ ಆರೋಪಿಯ ಸಹ ಅದೇ ಅಂಗಡಿ ಹೊಂದಿರುವುದಾಗಿ ಉತ್ತರಿಸುವರು. ನನ್ನ ದೂರಿನಲ್ಲಿ ಆರೋಪಿ ರಿಮೋಟ್ ಡಿಲಕ್ಸ್ ಟೈಯರ್ ಪ್ಯಾಕ್ಟರಿಯ ಮಾಲೀಕನಾಗಿದ್ದ ಬಗ್ಗೆ ಹೇಳಿ ಬರೆಸಿದ ಬಗ್ಗೆ ನನಗೆ ನೆನಪಿರುವುದಿಲ್ಲ. ವಿಜಯ ಕುಮಾರ್ ಪದ್ದು ಮತ್ತು ಮಾನವ್ ಪದ್ದು ಇವರು ನಮ್ಮ ಬ್ಯಾಂಕ್ ನಿಂದ ಪಿಗ್ಮಿ ಸಾಲ ಪಡೆದಿದ್ದು , ಆ ಸಮಯದಲ್ಲಿ ಆರೋಪಿಯು ಇವರ ಸಾಲಕ್ಕೆ ಜಾಮೀನುದಾರ ಅಂತ ಹೇಳಿ , ಮೋಸದಿಂದ ಆತನ ಕಡೆಯಿಂದ ನಿಪಿ 1 ರ ಚೆಕ್ ನ್ನು ಪಡೆದಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ರಿಮೋಟ್ ಡಿಲಕ್ಸ್ ಟೈಯರ್ ಪ್ಯಾಕ್ಟರಿಯಲ್ಲಿ ಕೆಲಸ ಮಾಡುವನು ಎಂದರೆ ಸರಿ, ಆತ ಮಾಲೀಕನಾಗಿರುವುದಿಲ್ಲ ಎಂದರೆ ಸರಿ. ವಿಜಯ ಕುಮಾರ್ ಪದ್ದು ಮತ್ತು ಮಾನವ್ ಪದ್ದು ಇವರು ನಮ್ಮ ಸೊಸೈಟಿಯಿಂದ ಸಾಲ ಪಡೆದುಕೊಂಡು ಓಡಿಹೇಗಿರುವರು ಎಂದರೆ ದಅರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ, ಸೊಸೈಟಿಯ ಸಿಬ್ಬಂದಿಗಳಿಗೆ ಮಾಹಿತಿ ಇರುವುದು ಎಂದು ಸಾಕ್ಷಿ ಉತ್ತರಿಸುವರು. ಈ ಓಡಿಹೋಗಿರುವ ವ್ಯಕ್ತಿಗಳನ್ನು ಹಿಡಿಯಲು ಆಗದೇ ಇರುವುದರಿಂದ , ಆ ಕಾರಣಕ್ಕೆ ನಾನು ಆರೋಪಿಯ ವಿರುದ್ದ ವೈಯಕ್ತಿಕನಾತೆಯಿಂದ ಈ ದೂರು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ವೈಯಕ್ತಿಕವಾಗಿ ನನ್ನ ಕಡೆಯಿಂದ ಯಾವುದೇ ಹಣವನ್ನು ಕೈಗಡ ರೂಪದಲ್ಲಿ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಈ ದೂರಿನಲ್ಲಿ ಹೇಳಿರುವಂತೆ ನನ್ನ ಮತ್ತು ಆರೋಪಿಯ ಮಧ್ಯೆ ಯಾವುದೇ ಸಾಲದ

ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತನನ್ನು ನಮ್ಮ ಸೊಸೈಟಿಯಲ್ಲಿ ಸಾಲಕ್ಕೆ ಸಂಬಂದಪಟ್ಟಂತೆ ಜಾಮೀನುದಾರ ಅಂತ ಹೇಳಿ ಆತನ ಕಡೆಯಿಂದ ಖಾಲಿ ಚೆಕ್ ನ್ನು ಪಡೆದು ಅದನ್ನು ನಾನು ವೈಯಕ್ತಿಕನಾತೆಯಿಂದ ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ದೂರಿನಲ್ಲಿ ಬರೆಸಿ ಹಾಕಿರುವ ಎಲ್ಲಾ ಸಂಗತಿಗಳು ನಿಜವಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ.

VIJAYAKUMAR KANNUR

Digitally signed by VIJAYAKUMAR KANNUR
Date: 2025.09.15 17:20:42 +0530

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ